ದಿಃ 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. **WAI** ವಕೀಲರಿಂದ:

ನಮ್ಮ ಮನೆತನದ ನನ್ನ ಅಜ್ಜಂದಿರಾದ ಬಾಸು ಮತ್ತು ತಾವರುನವರು ಬಂದು ಬಳ್ಳೂರಗಿ ಗ್ರಾಮದಲ್ಲಿ ನೆಲೆಸಿರುತ್ತಾರೆ. ಸದರಿಯವರು ಬಂದು ಈಗ 3 ತಲೆಮಾರು ಆಗಿರುತ್ತದೆ. ನನಗೆ ಅಂದಾಜು ವರ್ಷ ಹೇಳಲು ಬರುವುದಿಲ್ಲ. ನನ್ನ ಅಜ್ಜ ತಾವರುನವರು ಈಗ 80 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ಹೀರು 25 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನಗೆ ದಾವಾ ಆಸ್ತಿ ಸರ್ವೆ ನಂ. ಹೇಳಲು ಬರುವುದಿಲ್ಲ. ದಾವಾ ಆಸ್ತಿ 8 ಎಕರೆ ಇರಬಹುದು. ದಾವಾ ಆಸ್ತಿಗಳು ಎಷ್ಟು ಇವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ಪ್ರಕಾರ ಜಮೀನಿನಲ್ಲಿ 100 ಮನೆಗಳು ಇರತ್ತವೆ. ಈಗ 1 ವರ್ಷದ ಹಿಂದೆ ಸರ್ವೆ ಮಾಡಿರುತಾರೆ. ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾವು ಭೂಮಿ ಅಳತೆ ಮಾಡಲು ಸರ್ವೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಭೂಮಾಪಕರು ತಾವಾಗಿಯೇ ಸರ್ವೆ ಮಾಡಿದ್ದು ಅದರಲ್ಲಿ 100 ಮನೆ ಇರುತ್ತವೆ ಎಂದು ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಸಮಯದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ